ಪ್ರಕರಣವನ್ನು ಕೂಗಿಸಲಾಯಿತು. ಆರೋಪಿ ಹಾಜರು, ಶ್ರೀ ಎ.ಐ.ಪಿ ವಕೀಲರು ಹಾಜರಿದ್ದು, ಆರೋಪಿ ಪರವಾಗಿ ವಕಾಲತನ್ನು ಮತ್ತು ದಂ.ಪ್ರ.ಸಂ ಕಲಂ.252 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಆರೋಪಿ ಆಪಾದನೆಯನ್ನು ಒಪ್ಪಿಕೊಳ್ಳಲು ಸಿದ್ದರಿದ್ದು, ಆರೋಪಿಯು ಕೆಲಸದ ಒತ್ತಡದಿಂದ ಗಾಂಜಾ ಸೇವನೆ ಮಾಡಿದ್ದು, ಯಾವುದೇ ಉದ್ದೇಶಪೂರ್ವಕವಾಗಿರುವದಿಲ್ಲ. ಕೂಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದು, ಬಡವನಾಗಿದ್ದು, ಯಾವುದೇ ಆದಾಯ ಇರುವದಿಲ್ಲ. ಇದು ಮೊದಲ ಪ್ರಕರಣವಾಗಿದ್ದು, ಸರಳ ದಂಡವನ್ನು ವಿಧಿಸಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

ದಂ.ಪ್ರ.ಸಂ.ಕಲಂ.207 ರ ಅಡಿಯಲ್ಲಿ ದೋಷಾರೋಪಣ ಪತ್ರವನ್ನು ಪೂರೈಸಿ, ಆಪಾದನೆಯನ್ನು ರಚಿಸಿ, ಆರೋಪಿಗೆ ಓದಿ ಹೇಳಿದ್ದು, ಆಪಾದನೆಯನ್ನು ಒಪ್ಪಿಕೊಂಡು ಈಗ ಜೀವನಕ್ಕಾಗಿ ಕೂಲಿ ಕೆಲಸ ಮಾಡಿಕೊಂಡಿದ್ದು, ಕುಟುಂಬದವರು ಅವಲಂಭಿತವಾಗಿದ್ದು ಸಾಕಷ್ಟು ಆದಾಯ ಇರುವದಿಲ್ಲ. ಇದೇ ಮೊದಲ ಪ್ರಕರಣ ಆಗಿರುತ್ತದೆ. ಆದ್ದರಿಂದ ಸರಳ ದಂಡವನ್ನು ವಿಧಿಸಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

ಆರೋಪಿಯು ನಿಷೇಧಿತ ಗಾಂಜಾ ಸೇವನೆ ಮಾಡಿದ್ದ ಎಂದು ಆರೋಪಿಸಲಾಗಿರುತ್ತದೆ. ಅಪರಾಧದಿಂದ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ಗಂಭೀರ ನಷ್ಟ ಉಂಟಾಗುವ ಬಗ್ಗೆ ನಮೂದನೆ ಇರುವದಿಲ್ಲ. ಆರೋಪಿಯ ಆರ್ಥಿಕ ಪರಿಸ್ಥಿತಿಯನ್ನು ಮತ್ತು ಪ್ರಕರಣದ ಸಂದರ್ಭಗಳನ್ನು ಪರಿಗಣಿಸಿ, ಸರಳ ದಂಡವನ್ನು ವಿಧಿಸುವ ಮೂಲಕ ಪ್ರಕರಣವನ್ನು ಮುಕ್ತಾಯಗೊಳಿಸುವದು ಸೂಕ್ತವೆಂದು ಕಂಡುಬರುತ್ತದೆ. ಆರೋಪಿಯು ಅಪರಾಧವನ್ನು ಒಪ್ಪಿಕೊಂಡಿರುವದು ಸ್ವಇಚ್ಛೆಯಿಂದ ಕೂಡಿರುವದು ಕಂಡು ಬರುತ್ತದೆ. ಆದ್ದರಿಂದ ಈ ರೀತಿಯಾಗಿ ಪ್ರಕರಣವನ್ನು ತೀರ್ಮಾನಿಸುವದು ಸೂಕ್ತ ಎಂದು ನಿರ್ಣಯಿಸಿ, ಈ ಕೆಳಕಂಡಂತೆಃ

ಃಆದೇಶಃ

ದಂ.ಪ್ರ.ಸಂ.ಕಲಂಃ 252 ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಎನ್.ಡಿ.ಪಿ.ಎಸ್ ಕಾಯ್ದೆ ಕಲಂ.27(b) ಅಪರಾಧಕ್ಕಾಗಿ ತಪ್ಪಿತಸ್ಥನೆಂದು ನಿರ್ಣಯಿಸಿ ರೂ.3,000/- ದಂಡವನ್ನು ಪಾವತಿಸಲು ಆದೇಶಿಸಿದೆ.

ದಂಡವನ್ನು ಪಾವತಿಸಲು ತಪ್ಪಿದಲ್ಲಿ 3 ತಿಂಗಳು ಸಾದಾ ಸಜೆ ಅನುಭವಿಸಲು ಆದೇಶಿಸಿದೆ.

ಕಛೇರಿಯಲ್ಲಿ ದಂಡವನ್ನು ಪಾವತಿಸತಕ್ಕದ್ದು.

ಸಿ.ಸಿ.**18/2025**

ಆರೋಪಿಯು ಕಛೇರಿಯಲ್ಲಿ ದಂಡ ಪಾವತಿಸಿದ ನಂತರ ಪ್ರಕರಣ ಮುಕ್ತಾಯಗೊಳ್ಳುವದು.

06/03/2026
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.